## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 93/2021**

ಪಿಡಬ್ಲ್ಯೂ : 24

| | |
|---|---|
| ಸಾಕ್ಷಿದಾರರ ಹೆಸರು | : ವಿನಯ್ |
| ತಂದೆಯ / ಗಂಡನ ಹೆಸರು | : ಶಿವಣ್ಣ |
| ವಯಸ್ಸು | : 31 ವರ್ಷ |
| ಉದ್ಯೋಗ | : **Nodal** ಅಧಿಕಾರಿ , ಭಾರತಿ ಏರ್ ಟೆಲ್ ಲಿಮಿಟೆಡ್ , ಬೆಂಗಳೂರು |
| ವಾಸಸ್ಥಳ | : ಬೆಂಗಳೂರು |

**CW 31 in main charge sheet and CW 49 in additional charge sheet.**

**Naveen. Alternate Nodal Officer is placed as Co-ordinator.**

ಸಾಕ್ಷಿಯನ್ನು ಈ ದಿನ ದಿಃ 13.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನಾನು 2018 ರಿಂದ ಭಾರತಿ ಏರ್ ಟೆಲ್ ಲಿಮಿಟೆಡ್ , ಬೆಂಗಳೂರಿನಲ್ಲಿ ನೋಡಲ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 12.01.2021 ರಂದು ಡಿಸಿಪಿ ಕಛೇರಿ , ಮೈಸೂರು ಸಿಟಿ ರವರಿಂದ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎರಡು ಮೊಬೈಲ್ ನಂಬರ್ 9972994028 ಮತ್ತು

**9845078044** ಈ ನಂಬರ್ ಗಳ **10.12.2020** ರಿಂದ **16.12.2020** ರ ಅವಧಿಯ **CDR** ಮತ್ತು **Customer application Form** ನ್ನು **Certify** ಮಾಡಿಕೊಡುವಂತೆ ನಮ್ಮ ಕಛೇರಿಗೆ ಮನವಿ ಸಲ್ಲಿಸಿದ್ದರು. ಅದರಂತೆ ದಿಃ **02.03.2021** ರಂದು ಆ ದಿನ ಇದ್ದಂತಹ ನೋಡಲ್ ಅಧಿಕಾರಿ ಜಾನ್ಸನ್ ರವರು ಈ ನಂಬರ್ ಗಳ **Certificate** ಮತ್ತು **CDR** ಗಳನ್ನು ನೀಡಿರುತ್ತಾರೆ. ಅವರ ಸಹಿಯನ್ನು ನಾನು ಗುರುತಿಸಬಲ್ಲೆ. ಮೊಬೈಲ್ ನಂಬರ್ **9972994028** ಮಂಜು ಬಿನ್ ಮಲ್ಲಿಕಾರ್ಜುನಯ್ಯ ಎನ್ನುವ ವ್ಯಕ್ತಿಯ ಹೆಸರಿನಲ್ಲಿತ್ತು. **9845078044** ಈ ನಂಬರ್ ಗಿರೀಶ್ ಬಿನ್ ಮಂಜೇಶ್ ಎನ್ನುವವರ ಹೆಸರಿನಲ್ಲಿದೆ.

3. ಜಾನ್ಸನ್ ರವರು ಕಲಂ **65(ಬಿ)** ರ ಅಡಿಯಲ್ಲಿ ದೃಡೀಕರಣ ಪತ್ರವನ್ನು ನೀಡಿರುತ್ತಾರೆ. ಈಗ ನೋಡುತ್ತಿರುವ ದಾಖಲಾತಿಯ ಮೇಲೆ ಜಾನ್ಸನ್ ರವರ ಸಹಿ ಇರುತ್ತದೆ. **65(ಬಿ)** ರ ಅಡಿಯಲ್ಲಿ ನೀಡಿದ ದೃಡೀಕರಣ ಪತ್ರವನ್ನು ನಿಪಿ **61** ಎಂದು ಗುರುತುಪಡಿಸಿಕೊಳ್ಳಲಾಯಿತು. ಈಗ ಮಂಜು .ಎಂ. ನ **CAF** ನ್ನು ನೋಡುತ್ತಿದ್ದೇನೆ. ಅದರ ಮೇಲೆ ನಮ್ಮ ಕಂಪನಿಯ ಮೊಹರು ಇರುತ್ತದೆ. ಅದನ್ನು ನಿಪಿ **62** ಎಂದು ಗುರುತುಪಡಿಸಿಕೊಳ್ಳಲಾಯಿತು. ನಮ್ಮ ಕಂಪನಿ ಕಳುಹಿಸಿದ **CDR** ನ್ನು ನೋಡುತ್ತಿದ್ದೇನೆ.

(ಮುಂದುವರಿದ ಮುಖ್ಯ ವಿಚಾರಣೆಗೆ ಅಭಿಯೋಜಕರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು. )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**